# ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳು

ಕಂಪನಿಗಳ ಕಾಯ್ದೆ 1956 ರ ಅಡಿಯಲ್ಲಿ ನೋಂದಣಿಯಾಗಿರುವ, ಬ್ಯಾಂಕಿಂಗ್ ನಿಯಮಾವಳಿ ಕಾಯ್ದೆ 1949 ರ ಅಡಿಯಲ್ಲಿ ಬ್ಯಾಂಕಿಂಗ್ ವಹಿವಾಟು ನಡೆಸುತ್ತಿರುವ ಮತ್ತು 4ನೇ ಮಹಡಿ, ಹಂತ 2, ಸ್ಪೆನ್ಸರ್ ಪ್ಲಾಜಾ, ನಂ, 769, ಅನ್ನಾ ಸಲೈ, ಚೆನ್ನೈ 600 002 ರಲ್ಲಿ ನೋಂದಾಯಿತ ಕಚೇರಿ ಹೊಂದಿರುವ ಬ್ಯಾಂಕಿಂಗ್ ಕಂಪನಿ **ಇಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್** (ESFB) ಆಗಿದ್ದು, ಇನ್ನು ಮುಂದೆ ಇದನ್ನು **ಈಕ್ವಿಟಾಸ್ ಬ್ಯಾಂಕ್** ಎಂದು ಉಲ್ಲೇಖಿಸಲಾಗುತ್ತದೆ ಮತ್ತು ಇದರಿಂದ ನಿಮಗೆ ಪ್ರೀಪೇಯ್ಡ್ ಕಾರ್ಡ್ ವಿತರಿಸಲಾಗಿದೆ.

(**ನಿಯಮಗಳು ಮತ್ತು ಷರತ್ತುಗಳು**) ಈ ಕೆಳಗೆ ಪಟ್ಟಿ ಮಾಡಿದ ನಿಯಮಗಳು ಮತ್ತು ಷರತ್ತುಗಳು ಒದಿ ಮತ್ತು ಸಂಪೂರ್ಣ ನಿಯಮಗಳು ಮತ್ತು ಷರತ್ತುಗಳು ಪಟ್ಟಿಗಾಗಿ, ದಯವಿಟ್ಟು ಕಾರ್ಡ್ ಬಳಕೆಗೂ ಮುನ್ನ ವೆಬ್‌ಸೈಟ್ www.equitasbank.com ಅನ್ನು ನೋಡಿ ಮತ್ತು ಓದಿ. ಇಕ್ವಿಟಾಸ್ ಬ್ಯಾಂಕ್ ಪ್ರೀಪೇಯ್ಡ್ ಕಾರ್ಡ್ ಅನ್ನು ಪಡೆಯುವ ಮೂಲಕ ನೀವು ಬೇಷರತ್ತಾಗಿ ಮತ್ತು ಮರಳಿಸಲಾಗದಂತೆ ನಿಯಮಗಳು ಮತ್ತು ಷರತ್ತುಗಳು ಸಮ್ಮತಿಸುತ್ತೀರಿ ಮತ್ತು ಎಲ್ಲ ಸಮಯದಲ್ಲೂ ಅದಕ್ಕೆ ಬದ್ಧವಾಗಿರುತ್ತೀರಿ ಮತ್ತು ಎಲ್ಲ ನಿಯಮಗಳು ಮತ್ತು ಷರತ್ತುಗಳು ಓದಿದ್ದೀರಿ ಮತ್ತು ಅರ್ಥ ಮಾಡಿಕೊಂಡಿದ್ದೀರಿ ಎಂದು ಭಾವಿಸಲಾಗುತ್ತದೆ ಕಾರ್ಡ್ ಬಳಕೆಯನ್ನು ನಿರ್ದೇಶಿಸುವ ಸೂಕ್ತ ಸೂಚನೆಗಳು/ಮಾರ್ಗಸೂಚಿಗಳು/ ಸುತ್ತೋಲೆಗಳಲ್ಲಿನ ಯಾವುದೇ ಬದಲಾವಣೆಗಳು/ತಿದ್ದುಪಡಿಗಳೊಂದಿಗೆ ಅವರು ಅಪ್ಡೇಟ್ ಆಗಿರುವುದಕ್ಕೆ ಕೂಡಾ ನೀವು ಜವಾಬ್ದಾರರಾಗಿರುತ್ತೀರಿ.

ಜಾರಿಯಲ್ಲಿರುವ ಕಾರ್ಡ್‌ಗಳ ಬಳಕೆಯನ್ನು ನಿರ್ದೇಶಿಸುವ ಮತ್ತು ಕಾಲಕಾಲಕ್ಕೆ ಜಾರಿಗೊಳಿಸಲಾಗುವ ಸೂಕ್ತ ಸೂಚನೆಗಳು/ಮಾರ್ಗಸೂಚಿಗಳು/ಸುತ್ತೋಲೆಗಳನ್ನು ಕಾರ್ಡ್‌ದಾರರು ಉಲ್ಲಂಘಿಸಿದರೆ ಎಲ್ಲ ಬಾಧ್ಯತೆಗಳನ್ನು ESFB ತ್ಯಜಿಸುತ್ತದೆ.

ನಿಯಮಗಳು ಮತ್ತು ಷರತ್ತುಗಳು ಸಮ್ಮತವಲ್ಲದಿದ್ದರೆ, ಕಾರ್ಡ್ ಅನ್ನು ಕಾರ್ಡದಾರರು ಬಳಸಬಾರದು ಮತ್ತು ESFB ತಕ್ಷಣವೇ ವಾಪಸು ಮಾಡಬೇಕು. ಬ್ಯಾಂಕ್‌ನ ವೆಬ್‌ಸೈಟ್ www.equitasbank.com ನಲ್ಲಿ ಲಭ್ಯವಿರುವ ಬ್ಯಾಂಕ್‌ನ ದೂರು ಪರಿಹಾರ ನೀತಿಯನ್ನು ಪರಿಶೀಲಿಸುವಂತೆ ಅಥವಾ ನಿಮ್ಮ ಸಮೀಪದ ಶಾಖೆಯನ್ನು ಭೇಟಿ ಮಾಡುವಂತೆ ESFB ಆಗ್ರಹಿಸುತ್ತದೆ. RBI ಮಾರ್ಗಸೂಚಿಗಳಿಗೆ ಅನುಗುಣವಾಗಿ ಈ ನೀತಿಯನ್ನು ರೂಪಿಸಲಾಗಿದೆ ಮತ್ತು ನೀವು ನಡೆಸದ ವಹಿವಾಟಿಗೆ ನಿಮ್ಮ ಖಾತೆ/ಕಾರ್ಡ್‌ನಿಂದ ಡೆಬಿಟ್ ಆಗುವ ಅಸಂಭವನೀಯ ಘಟನೆಯಲ್ಲಿ ಸಹಾಯ ಮಾಡುತ್ತದೆ.

ಕಾರ್ಡ್ ಖಾತೆ ವಿವರ ಪಡೆಯುವುದು: ಲಭ್ಯವಿರುವ ಬ್ಯಾಲೆನ್ಸ್ ಸೇರಿದಂತೆ ("ಕಾರ್ಡ್ ಬ್ಯಾಲೆನ್ಸ್") ಕಾರ್ಡ್‌ಗೆ ಸಂಬಂಧಿಸಿದ ಮಾಹಿತಿಯನ್ನು www.equitasbank.com ಗೆ ಲಾಗಿನ್ ಮಾಡಿದ ನಂತರ ಅಥವಾ ನಿಮ್ಮ ಕಾರ್ಡ್‌ನ ಹಿಂಭಾಗದಲ್ಲಿ ಪಟ್ಟಿ ಮಾಡಿದ ಫೋನ್ ನಂಬರ್ ಮತ್ತು/ಅಥವಾ ಇಮೇಲ್ ವಿಳಾಸದಲ್ಲಿ ಗ್ರಾಹಕ ಸೇವೆ ಕೇಂದ್ರಕ್ಕೆ ಕರೆ ಮಾಡುವುದು/ಬರೆಯುವ ಮೂಲಕ ನೋಡಬಹುದು.

ಕಾರ್ಡ್ ಹೊಂದಿರುವವರ ಬಾಧ್ಯತೆ:

ಕಾರ್ಡ್ ಸ್ವೀಕರಿಸಿದ ತಕ್ಷಣ ಅದರ ಹಿಂಬದಿಯಲ್ಲಿ ನೀವು ಸಹಿ ಮಾಡಬೇಕು. ಬಳಕೆ ಮಾಡುವುದಕ್ಕಾಗಿ ಯಾವುದೇ ಇತರ ವ್ಯಕ್ತಿಗೆ ನೀವು ಅನುಮತಿ ನೀಡಬಾರದು.

ESFB ವಿತರಿಸಿದ ಪ್ರೀಪೇಯ್ಡ್ ಕಾರ್ಡ್ ಭಾರತದಲ್ಲಿ ಕಾಲಕಾಲಕ್ಕೆ ಬ್ಯಾಂಕ್ ಅನುಮತಿಸಿದ ವಹಿವಾಟುಗಳಿಗೆ ಮಾತ್ರ ಮಾನ್ಯವಾಗಿರುತ್ತದೆ. ಉದಾಹರಣೆಗೆ, ಪಾಯಿಂಟ್ ಆಫ್ ಸೇಲ್ (POS), ಇ-ಕಾಮರ್ಸ್ ಮತ್ತು ರುಪೇ/ವೀಸಾ/ಮಾಸ್ಟರ್‌ಕಾರ್ಡ್ ಅನ್ನು ಸಮ್ಮತಿಸುವ ಎಲ್ಲ ATMಗಳು. ಆದರೆ, ಪ್ರೀಪೇಯ್ಡ್ ಗಿಫ್ಟ್ ಕಾರ್ಡ್ ಕೇವಲ ಪಾಯಿಂಟ್ ಆಫ್ ಸೇಲ್ (POS) ಮತ್ತು ಇಕಾಮರ್ಸ್ ವಹಿವಾಟಿನಲ್ಲಿ ಮಾತ್ರ ಬಳಸಲು ಮಾನ್ಯವಾಗಿದೆ. ನಗದು ಹಿಂಪಡೆಯುವುದು, ಕ್ಯಾಶ್ ಔಟ್, ರಿಫಂಡ್ ಅಥವಾ ಫಂಡ್ ವರ್ಗಾವಣೆಯನ್ನು ಪ್ರೀಪೇಯ್ಡ್ ಗಿಫ್ಟ್ ಕಾರ್ಡ್‌ನಲ್ಲಿ ಅನುಮತಿಸಲಾಗುವುದಿಲ್ಲ.

ಪ್ರೀಪೇಯ್ಡ್ ಕಾರ್ಡ್ ಎಲ್ಲ ಸಮಯದಲ್ಲೂ ESFB ಸ್ವತ್ತಾಗಿರುತ್ತದೆ ಮತ್ತು ಬೇಷರತ್ತಾಗಿ ಮತ್ತು ಬ್ಯಾಂಕ್ ವಿನಂತಿಯ ಮೇರೆಗೆ ತಕ್ಷಣವೇ ಬ್ಯಾಂಕ್‌ಗೆ ವಾಪಸು ಮಾಡಬೇಕು.

ಪ್ರೀಪೇಯ್ಡ್ ಕಾರ್ಡ್ ಅನ್ನು ಕಾರ್ಡ್‌ದಾರರು ಯಾವುದೇ ಸನ್ನಿವೇಶದಲ್ಲೂ ವರ್ಗಾವಣೆ ಮಾಡಲಾಗದು ಅಥವಾ ನಿಯೋಜಿಸಲಾಗದು.

POS ಮತ್ತು ಯಾವುದೇ ATMಳಲ್ಲಿನ ಕಾರ್ಡ್ ಬಳಕೆಗಾಗಿ ಕಾರ್ಡ್ ಹೊಂದಿರುವವರಿಗೆ ಸಂಬಂಧಿಸಿದ ವೈಯಕ್ತಿಕ ಗುರುತಿನ ಸಂಖ್ಯೆ (PIN) ಅನ್ನು ಕಾರ್ಡ್ ಹೊಂದಿರುವವರು ಎಂದಿಗೂ ಗೌಪ್ಯವಾಗಿ ಇಟ್ಟುಕೊಳ್ಳಬೇಕು ಮತ್ತು ಕಾರ್ಡ್ ಹೊಂದಿರುವವರ ವೈಯಕ್ತಿಕ ಬಳಕೆಗಾಗಿ ಇದು ಇರುತ್ತದೆ. ಯಾವುದೇ ತೃತೀಯ ಪಕ್ಷ, ಬ್ಯಾಂಕ್ ಸಿಬ್ಬಂದಿ ಅಥವಾ ವ್ಯಾಪಾರಿ ಸಂಸ್ಥೆಗೆ PIN ಅನ್ನು ಯಾವುದೇ ಸನ್ನಿವೇಶದಲ್ಲೂ ಅಥವಾ ಯಾವುದೇ ರೀತಿಯಲ್ಲೂ, ಸ್ವಯಂಪ್ರೇರಿತವಾಗಿಯಾಗಲೀ ಅಥವಾ ಇತರ ವಿಧಾನದಲ್ಲಾಗಲೀ ಬಹಿರಂಗಗೊಳಿಸಬಾರದು.

RBI ಮಾರ್ಗಸೂಚಿಗಳ ಪ್ರಕಾರ ಮತ್ತು ಕಾರ್ಡ್ ವಹಿವಾಟುಗಳ ಭದ್ರತೆಯನ್ನು ಹೆಚ್ಚಿಸುವುದಕ್ಕಾಗಿ, ಕಾರ್ಡ್ ವಿತರಣೆ / ಮರುವಿತರಣೆಯ ಸಮಯದಲ್ಲಿ, ಭಾರತದೊಳಗೆ ATM ಮತ್ತು ಪಾಯಿಂಟ್ ಆಫ್ ಸೇಲ್ (POS) ಸಾಧನಗಳಲ್ಲಿ ಸಂಪರ್ಕ ಆಧಾರದ ಪಾಯಿಂಟ್ಗಳಲ್ಲಿ ಮಾತ್ರ ಬಳಕೆಗೆ ಇದನ್ನು ಸಕ್ರಿಯಗೊಳಿಸಬೇಕು. ಮೊಬೈಲ್ ಅಪ್ಲಿಕೇಶನ್ / ಗ್ರಾಹಕರ ಪೋರ್ಟಲ್ / ATMಗಳು / ಇಂಟರ್‌ಯಾಕ್ಟಿವ್ ವಾಯ್ಸ್ ರೆಸ್ಪಾನ್ಸ್ (IVR) / ಶಾಖೆಗಳಲ್ಲಿ / ಕಚೇರಿಗಳಲ್ಲಿ ವಹಿವಾಟುಗಳನ್ನು ನಡೆಸಲು (ಆನ್ ಲೈನ್ ವಹಿವಾಟುಗಳು / ಇಕಾಮರ್ಸ್) ಅನುವು ಮಾಡುವುದಕ್ಕೆ ಗ್ರಾಹಕರಿಗೆ ಸೌಲಭ್ಯವನ್ನು ಒದಗಿಸಲಾಗಿದೆ. ಇದರ ಜೊತೆಗೆ, ದೇಶೀಯ, PoS/ATMಗಳು/ ಆನ್‌ಲೈನ್ ವಹಿವಾಟುಗಳು/ ಕಾಂಟ್ಯಾಕ್ಟ್‌ಲೆಸ್ ವಹಿವಾಟುಗಳು ಇತ್ಯಾದಿ ಎಲ್ಲ ರೀತಿಯ ವಹಿವಾಟುಗಳ ವಹಿವಾಟು ಮಿತಿಯನ್ನು (ESFB ನಿಗದಿಸಿದ ಯಾವುದೇ ಒಟ್ಟಾರೆ ಕಾರ್ಡ್ ಮಿತಿ ಇದ್ದರೆ ಅದರಲ್ಲಿ) ಆನ್ ಮಾಡಲು/ಆಫ್ ಮಾಡಲು ಮತ್ತು ನಿಗದಿಸಲು/ಮಾರ್ಪಡಿಸಲು ಸೌಲಭ್ಯವನ್ನು ಒದಗಿಸಲಾಗಿದೆ. ಪ್ರೀಪೇಯ್ಡ್ ಉಡುಗೊರೆ ಕಾರ್ಡ್‌ಗಳಿಗೆ ಮತ್ತು ಸಾಮೂಹಿಕ ಸಾರಿಗೆ ವ್ಯವಸ್ಥೆಗಳಲ್ಲಿ ಬಳಸಲಾಗುವ ಕಾರ್ಡ್‌ಗಳಿಗೆ ಈ ಮಾರ್ಗಸೂಚಿಯ ಅನುಕೂಲಗಳು ಕಡ್ಡಾಯವಾಗಿಲ್ಲ.

ಕಾರ್ಡ್ ಹೊಂದಿರುವವರ ಪ್ರೀಪೇಯ್ಡ್ ಕಾರ್ಡ್ ಅನ್ನು ಕಾರ್ಡ್ ಬಳಕೆಗೆ ಜಾರಿ ಮಾಡುವ ಮೂಲಕ ಯಾವುದೇ ವಿತ್‌ಡ್ರಾ, ವರ್ಗಾವಣೆ ಮತ್ತು ಇತರ ವ್ಯಾಪಾರಿ ವಹಿವಾಟುಗಳ ಮೊತ್ತದೊಂದಿಗೆ ತಕ್ಷಣವೇ ಡೆಬಿಟ್ ಮಾಡಲಾಗುತ್ತದೆ. ಕೆಲವು ಬಾರಿ ವಹಿವಾಟು ಮೊತ್ತ ಮತ್ತು/ಅಥವಾ ಟಿಪ್‌ಗಳು, ಸರ್‌ಚಾರ್ಜ್ ಅಥವಾ ಹೆಚ್ಚುವರಿ ವಹಿವಾಟು ಮೊತ್ತವನ್ನು ನಂತರದ ದಿನಾಂಕದಲ್ಲಿ ಕಾರ್ಡ್‌ಗೆ ಡೆಬಿಟ್ ಮಾಡಲಾಗುತ್ತದೆ. ಯಾವುದೇ ಇಂತಹ ವಹಿವಾಟಿನ ಅಡಿಯಲ್ಲಿ ಮಾಡಿದ ವೆಚ್ಚಗಳನ್ನು ಪೂರೈಸಲು ಪ್ರೀಪೇಯ್ಡ್ ಕಾರ್ಡ್ನಲ್ಲಿ ಸೂಕ್ತ ಬ್ಯಾಲೆನ್ಸ್ ಅನ್ನು ತಾನು ಹೊಂದಿದ್ದೇನೆ ಎಂಬುದನ್ನು ಕಾರ್ಡ್ ಹೊಂದಿರುವವರು ಖಚಿತಪಡಿಸಬೇಕು.

ಕಾರ್ಡ್ ಹೊಂದಿರುವವರು ಅನುಮತಿ ನೀಡಿರಲಿ ಅಥವಾ ನೀಡಿಲ್ಲದಿರಲಿ ESFB ವಿತರಿಸಿದ ಪ್ರಿಪೇಯ್ಡ್ ಕಾರ್ಡ್ ಬಳಸಿ ನಡೆಸಿದ ವಹಿವಾಟುಗಳಿಗೆ ಕಾರ್ಡ್ ಹೊಂದಿರುವವರು ಜವಾಬ್ದಾರರಾಗಿರುತ್ತಾರೆ ಮತ್ತು ಕಾರ್ಡ್ ಅಥವಾ ಸಂಬಂಧಿಸಿದ PIN ಯಾವುದೇ ಅನಧಿಕೃತ ಬಳಕೆಯಿಂದ ಉಂಟಾದ, ಯಾವುದೇ ರೀತಿಯಲ್ಲಿ ಉಂಟಾಗಬಹುದಾದ ನಷ್ಟ ಅಥವಾ ಹಾನಿ ಮತ್ತು ಈ ಕರಾರಿನ ವಜಾಗೊಳಿಸುವಿಕೆಗೆ ಒಳಪಟ್ಟು ಭಾರತದಲ್ಲಿ ಕಾಲಕಾಲಕ್ಕೆ ಜಾರಿಯಲ್ಲಿರಬಹುದಾದ ಯಾವುದೇ ಕಾನೂನು ಅಥವಾ RBI ಮಾರ್ಗಸೂಚಿಗಳ ಉಲ್ಲಂಘನೆಯಿಂದ ಉಂಟಾದ ಯಾವುದೇ ದಂಡ ಕ್ರಮದ ವಿರುದ್ಧ ಬ್ಯಾಂಕ್ ಅನ್ನು ನಷ್ಟರಕ್ಷಣೆ ಮಾಡುತ್ತಾರೆ.

ಪ್ರಿಪೇಯ್ಡ್ ಕಾರ್ಡ್ ಅನ್ನು ವಿತರಿಸಲು, ನವೀಕರಿಸಲು ಅಥವಾ ಅವಧಿ ಮೀರುವುದಕ್ಕೂ ಮೊದಲು ಮುಚ್ಚಲು ESFB ಶಾಖೆಗಳನ್ನು ನೀವು ಸಂಪರ್ಕಿಸಬಹುದು. ಅವಧಿ ಮೀರಿದಾಗ ನಿಮ್ಮ ಪ್ರಿಪೇಯ್ಡ್ ಕಾರ್ಡ್ ಖಾತೆಯನ್ನು ನವೀಕರಿಸುವ ಏಕಪಕ್ಷೀಯ ಹಕ್ಕು ಮತ್ತು ವಿವೇಚನೆಯನ್ನು ಬ್ಯಾಂಕ್ ಕಾಯ್ದಿರಿಸಿದೆ.

ಈ ನಿಯಮಗಳು ಮತ್ತು ಷರತ್ತುಗಳು ಒಳಪಟ್ಟು ಕಾರ್ಡ್ ಅನ್ನು ವಿನಯವಾಗಿ ಮತ್ತು ಸೂಕ್ತವಾಗಿ ಬಳಸುವ ಮೂಲಕ ಕಾರ್ಡ್ ಬ್ಯಾಲೆನ್ಸ್ ಅನ್ನು ಕಾರ್ಡ್ ಹೊಂದಿರುವವರು ಬಳಸಬಹುದು. ಪ್ರಿಪೇಯ್ಡ್ ಕಾರ್ಡ್ ಖಾತೆಯಲ್ಲಿ ಇರುವ ಕ್ರೆಡಿಟ್‌ನಲ್ಲಿನ ಮೊತ್ತದ ಮೇಲೆ ಕಾರ್ಡ್ ಹೊಂದಿರುವವರಿಗೆ ಯಾವುದೇ ಬಡ್ಡಿ ಪಾವತಿ ಮಾಡಲಾಗುವುದಿಲ್ಲ. ಅನ್ವಯಿಕ ಶುಲ್ಕಗಳು ಸೇರಿದಂತೆ ಖರೀದಿ/ಸೇವೆಗಳನ್ನು ಪಡೆಯಲು ಅಗತ್ಯ ಮೊತ್ತದ ವಹಿವಾಟು ನಡೆಸುವಂತೆ ಕಾರ್ಡ್ ಹೊಂದಿರುವವರಿಗೆ ಸೂಚಿಸಲಾಗಿದೆ. ಇಲ್ಲವಾದಲ್ಲಿ, ವಹಿವಾಟನ್ನು ಪುರಸ್ಕರಿಸಲಾಗುವುದಿಲ್ಲ.

ವಹಿವಾಟು ನಡೆದ 7 ದಿನಗಳೊಳಗೆ ATM ಅಥವಾ ವ್ಯಾಪಾರಿ ಸಂಸ್ಥೆಯಲ್ಲಿನ ವಹಿವಾಟು ವಿವರಗಳಲ್ಲಿ ಇರಬಹುದಾದ ಯಾವುದೇ ಅಸಹಜತೆಗಳು ಅಥವಾ ವ್ಯತ್ಯಯಗಳ ಬಗ್ಗೆ ಕಾರ್ಡ್ ಹೊಂದಿರುವವರು ಬ್ಯಾಂಕ್‌ಗೆ ಲಿಖಿತವಾಗಿ ಮಾಹಿತಿ ನೀಡಬೇಕು. ಈ ಸಮಯದಲ್ಲಿ ಇಂತಹ ಯಾವುದೇ ನೋಟಿಸ್ ಅನ್ನು ಸ್ವೀಕರಿಸದಿದ್ದರೆ, ವಹಿವಾಟು ಸರಿ ಇದೆ ಎಂದು ಬ್ಯಾಂಕ್ ಭಾವಿಸುತ್ತದೆ.

ವಹಿವಾಟು ಮರಳಿಸುವ ಸಮಯದಲ್ಲಿ ಕಾರ್ಡ್ ಖಾತೆಯಲ್ಲಿ ಕ್ರೆಡಿಟ್‌ಗೆ ಕಾರ್ಡ್ ಹೊಂದಿರುವವರು ಅರ್ಹರಾಗಿರುತ್ತಾರೆ. ಆದರೆ, ಕಾರ್ಡ್ ಹೊಂದಿರುವವರಿಗೆ ನಗದು ಮರುಪಾವತಿ ಮಾಡಲಾಗುವುದಿಲ್ಲ. ಹಣವನ್ನು ಮರುಪಾವತಿ ಮಾಡುವಾಗ ಸಂಬಂಧಿಸಿದ ವ್ಯಾಪಾರಿಗಳಿಗೆ ವಿಧಿಸಿದ ಅನ್ವಯಿಕ ಶುಲ್ಕಗಳನ್ನು ESFB ವಸೂಲಿ ಮಾಡುತ್ತದೆ.

ಕಳೆದಿರುವ ಮತ್ತು ನಷ್ಟವಾದ ಕಾರ್ಡ್‌ಗಳು:

ಕಾರ್ಡ್ ಅಥವಾ ಅದರ PIN ಕಳೆದಿದ್ದರೆ, ಕಳ್ಳತನವಾಗಿದ್ದರೆ ಅಥವಾ ದುರ್ಬಳಕೆಯಾಗಿದ್ದರೆ, ಕಾರ್ಡ್‌ನ ಹಿಂಭಾಗದಲ್ಲಿ ಪಟ್ಟಿ ಮಾಡಿದ ಟೆಲಿಫೋನ್ ಸಂಖ್ಯೆಗಳಲ್ಲಿ ESFB ಗ್ರಾಹಕ ಸೇವೆ ಕೇಂದ್ರವನ್ನು ("ಗ್ರಾಹಕ ಸೇವೆ ಕೇಂದ್ರ") ಕಾರ್ಡ್ ಹೊಂದಿರುವವರು ತಕ್ಷಣವೇ ಸಂಪರ್ಕಿಸಬೇಕು. ಕಾರ್ಡ್ ಹೊಂದಿರುವವರು PIN ಅನ್ನು ನೆನಪಿಟ್ಟುಕೊಳ್ಳಬೇಕು ಮತ್ತು PIN ಮೇಲರ್ ಅನ್ನು ತಕ್ಷಣವೇ ನಾಶಪಡಿಸಬೇಕು. ವರದಿ ಮಾಡಿದ 24 ಗಂಟೆಗಳಲ್ಲಿ ಕಾರ್ಡ್ ನಿರ್ಬಂಧಿಸಲಾಗುತ್ತದೆ ಮತ್ತು ಕಾರ್ಡ್ ನಷ್ಟವನ್ನು ಕಾರ್ಡ್ ಹೊಂದಿರುವವರು ವರದಿ ಮಾಡಿದ ಸಮಯದಿಂದ ಪ್ರಿಪೇಯ್ಡ್ ಕಾರ್ಡ್ ಖಾತೆಯಲ್ಲಿರುವ ಹಣದ ರಕ್ಷಣೆಯ ರಿಸ್ಕ್ ಆರಂಭವಾಗುತ್ತದೆ. ESFB ತನ್ನ ಏಕಪಕ್ಷೀಯ ವಿವೇಚನೆ ಮತ್ತು ಕಾರ್ಡ್ ಹೊಂದಿರುವವರ ಗುರುತನ್ನು ಪರಿಶೀಲಿಸಿದ ನಂತರ, ಕಳೆದಿರುವ ಕಾರ್ಡ್ ಬದಲಿಗೆ ನಿಗದಿಸಿದ ಫೀಗಳನ್ನು ವಿಧಿಸಿದ ನಂತರದಲ್ಲಿ ಹೊಸ ಕಾರ್ಡ್ ಅನ್ನು ವಿತರಿಸಬಹುದಾಗಿದೆ.

ವಹಿವಾಟು ಮಿತಿಗಳು:

ಪಾಯಿಂಟ್ ಆಫ್ ಸೇಲ್‌ನಲ್ಲಿ ESFB ಮತ್ತು/ಅಥವಾ ವ್ಯಾಪಾರಿಗಳು ಕಾರ್ಡ್ ಬಳಸಲು ಅನುಮತಿ ನೀಡುವ ಮೊತ್ತ ಮತ್ತು ವಹಿವಾಟುಗಳ ಸಂಖ್ಯೆಯಲ್ಲಿ ನಿಗದಿಸಿದ ಕಲಾವಧಿಯಲ್ಲಿ ಮಿತಿಯನ್ನು ವಿಧಿಸಬಹುದು ("ವಹಿವಾಟು ಮಿತಿಗಳು"). ESFB ವೆಬ್ ಸೈಟ್ www.equitasbank.com ನಲ್ಲಿ ನಿಗದಿಸಿದ ವಹಿವಾಟು ಮಿತಿಗಳು ಕಾರ್ಡ್‌ಗೆ ಅನ್ವಯಿಸುತ್ತವೆ ಮತ್ತು ಕಾರ್ಡ್ ಹೊಂದಿರುವವರಿಗೆ ಇದು ಬಾಧ್ಯವಾಗಿರುತ್ತದೆ. ESFB ಯಾವುದೇ ಸಮಯದಲ್ಲಿ ಯಾವುದೇ ಕಾರಣಕ್ಕೆ ವಹಿವಾಟು ಮಿತಿಗಳನ್ನು ಮಾರ್ಪಡಿಸಬಹುದು. ಆನ್‌ಲೈನ್‌ನಲ್ಲಿ equitasbank.com ನಲ್ಲಿ ಈ ಬದಲಾವಣೆಗಳನ್ನು ಕಾರ್ಡ್ ಹೊಂದಿರುವವರು ನೋಡಬಹುದು ಅಥವಾ ಗ್ರಾಹಕ ಸೇವೆ ಕೇಂದ್ರಕ್ಕೂ ಕರೆ ಮಾಡಬಹುದು.

ಉಲ್ಲಂಘನೆ:

ಕಾರ್ಡ್ ಹೊಂದಿರುವರು ಈ ನಿಯಮಗಳು ಮತ್ತು ಷರತ್ತುಗಳು ಉಲ್ಲಂಘನೆ ಮಾಡಿದ ಸಮಯದಲ್ಲಿ, ಪ್ರೀಪೇಯ್ಡ್ ಕಾರ್ಡ್ ಅನ್ನು ರದ್ದು ಮಾಡಲು ಅಥವಾ ವಜಾಗೊಳಿಸಲು, ಯಾವುದೇ ರೀತಿಯಲ್ಲಿ ಮರಳಿಸಲಾಗದಂತೆ ಏಕಪಕ್ಷೀಯ ಮತ್ತು ಎಕ್ಸ್‌ಕ್ಲೂಸಿವ್ ಹಕ್ಕನ್ನು ESFB ಹೊಂದಿರುತ್ತದೆ.

ಇದರಲ್ಲಿ ಇರುವ ನಿಯಮಗಳು ಮತ್ತು ಷರತ್ತುಗಳು ಕಾರ್ಡ್‌ಹೊಂದಿರುವವರು ಮಾಡಿದ ಯಾವುದೇ ಉಲ್ಲಂಘನೆಯಿಂದಾಗಿ ನೇರವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ESFB ಉಂಟಾಗುವ ಮತ್ತು/ಅಥವಾ ಬಳಲುವ ಯಾವುದೇ ನಷ್ಟ, ಹಾನಿ, ಕ್ಲೇಮ್, ದಂಡ, ವೆಚ್ಚ, ಪರಿಹಾರ, ಶುಲ್ಕಗಳು ಅಥವಾ ವೆಚ್ಚಗಳ ವಿರುದ್ಧ (ಕಾನೂನು ಕೌನ್ಸೆಲ್ ಫೀಗಳೂ ಸೇರಿದಂತೆ) ESFB ಅನ್ನು ಕಾರ್ಡ್‌ಹೊಂದಿರುವವರು ವೆಚ್ಚ ರಕ್ಷಣೆ ಮಾಡುತ್ತಾರೆ ಮತ್ತು ಸಮ್ಮತಿಸುತ್ತಾರೆ.

ಅವಧಿ ಮೀರುವುದು, ರದ್ದತಿ ಮತ್ತು ವಜಾಗೊಳಿಸುವುದು:

ಕಾರ್ಡ್‌ನಲ್ಲಿ ಪ್ರಿಂಟ್ ಮಾಡಿದ ಅವಧಿಗೆ ಕಾರ್ಡ್ ಹೊಂದಿರುವವರಿಗೆ ವಿತರಿಸಿದ ಕಾರ್ಡ್ ಮಾನ್ಯವಾಗಿರುತ್ತದೆ, ಕಾರ್ಡ್‌ನಲ್ಲಿ ನಮೂದಿಸಿದ ಅವಧಿ ಮೀರುವ ದಿನಾಂಕದಂದು ಕಾರ್ಡ್ ಅವಧಿ ಮೀರುತ್ತದೆ. ಕಾರ್ಡ್ ಬಳಕೆಯನ್ನು ಈ ಸನ್ನಿವೇಶದಲ್ಲಿ ತಕ್ಷಣವೇ ESFB ರದ್ದು ಮಾಡಬಹುದು ಅಥವಾ ಅಮಾನತು ಮಾಡಬಹುದು: (i) ಕಾರ್ಡ್ ಹೊಂದಿರುವವರು ದಿವಾಳಿಯಾಗಿದ್ದಾರೆ ಎಂದು ಘೋಷಿಸಿದಾಗ ಅಥವಾ ಅವರ ಮರಣದಲ್ಲಿ. (ii) ಈ "ನಿಯಮಗಳು ಮತ್ತು ಷರತ್ತುಗಳು" ಅಡಿಯಲ್ಲಿ ಯಾವುದೇ ನಿಯಮಗಳು, ಷರತ್ತುಗಳು, ಬಾಧ್ಯತೆಗಳು ಅಥವಾ ಹೊಣೆಗಾರಿಕೆಗಳನ್ನು ಕಾರ್ಡ್ ಹೊಂದಿರುವವರು ಉಲ್ಲಂಘಿಸಿದರೆ. (iii) ಸತತ ಒಂದು ವರ್ಷದ ಅವಧಿಗೆ ಯಾವುದೇ ಹಣಕಾಸು ವಹಿವಾಟು ನಡೆಸದ PPI ಗಳನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. (iv) ಸಂಬಂಧಿಸಿದ ನ್ಯಾಯಾಲಯವು ಕಾರ್ಡ್ ಹೊಂದಿರುವವರ ಮೇಲೆ ಯಾವುದೇ ನಿರ್ಬಂಧ ಅಥವಾ ನಿಷೇಧವನ್ನು ವಿಧಿಸಿದರೆ ಅಥವಾ ಭಾರತದಲ್ಲಿನ ಯಾವುದೇ ನಿಯಂತ್ರಕ ಅಥವಾ ಶಾಸನಾತ್ಮಕ ಪ್ರಾಧಿಕಾರ ಅಥವಾ ಯಾವುದೇ ತನಿಖಾ ಏಜೆನ್ಸಿಯು ಆದೇಶ ಹೊರಡಿಸಿದರೆ. (v) ಅನ್ವಯಿಸುವ ಕಾನೂನುಗಳು, ನಿಯಮಗಳು ಮತ್ತು ಮಾರ್ಗಸೂಚಿಗಳು ಅಥವಾ ಸುತ್ತೋಲೆ ಅಡಿಯಲ್ಲಿ ಪ್ರೀಪೇಯ್ಡ್ ಕಾರ್ಡ್ ಪ್ರೋಗ್ರಾಮ್ ಅಕ್ರಮವಾದರೆ. (vi) ಇಡೀ ಪ್ರೀಪೇಯ್ಡ್ ಕಾರ್ಡ್ ಪ್ರೋಗ್ರಾಮ್ ಅನ್ನು ವಜಾಗೊಳಿಸಿದರೆ. (vii) ಕಾರ್ಡ್ ಅನ್ನು ರದ್ದು ಮಾಡಲು ಅಥವಾ ಅಮಾನತಿನಲ್ಲಿಡಲು ಕಾರ್ಪೊರೇಟ್/ಪ್ರೋಗ್ರಾಮ್ ಮ್ಯಾನೇಜರ್‌ರಿಂದ ನಿರ್ದಿಷ್ಟ ವಿನಂತಿ ಸ್ವೀಕರಿಸಿದಾಗ ಅಥವಾ(viii) ರದ್ದು ಮಾಡಿದ ಅಥವಾ ಅಮಾನತಿನಲ್ಲಿಟ್ಟ ಕಾರ್ಡ್‌ಗೆ ಸಂಬಂಧಿಸಿದಂತೆ ಪಾವತಿಗಳನ್ನು ಪ್ರಕ್ರಿಯೆಗೊಳಿಸುವುದು ಅಥವಾ (ix) ಕಾನೂನು ಅಥವಾ ನಿಯಮಾವಳಿಯು ವಿಧಿಸಿದ ಮಿತಿ ಸೇರಿದಂತೆ, ಆದರೆ ಅದಕ್ಕೆ ಸೀಮಿತವಾಗಿಲ್ಲದಂತೆ ಸಕಾರಣ ನಿಯಂತ್ರಣದ ಹೊರಗಿನಕಾರಣಗಳಿಗೆ ಕಾರ್ಡ್‌ಗೆ ಸಂಬಂಧಿಸಿದಂತೆ ಪಾವತಿಗಳನ್ನು ಪ್ರಕ್ರಿಯೆಗೊಳಿಸುವದನ್ನು ESFB ನಡೆಸಲು ಸಾಧ್ಯವಾಗದಿರುವಿಕೆ ಅಥವಾ ತಡೆಯಲು ಸಾಧ್ಯವಾಗದಿರುವಿಕೆಯಲ್ಲಿ.

ಫೀಗಳು:

ನಗದು ವಿತ್‌ಡ್ರಾಗಳು, ಬ್ಯಾಲೆನ್ಸ್ ವಿಚಾರಣೆ ಮತ್ತು/ಅಥವಾ ಇತರ ವಹಿವಾಟುಗಳಂತಹ ವಹಿವಾಟು ಫೀಗಳು ಅನ್ವಯವಾಗುವಲ್ಲಿ ವಹಿವಾಟು ಮೊತ್ತದ ಡೆಬಿಟ್ ಎಂಟ್ರಿ ಮಾಡುವಾಗ ಅಥವಾ ದಿನದ ಕೊನೆಯಲ್ಲಿ ಪ್ರೀಪೇಯ್ಡ್ ಕಾರ್ಡ್ ಖಾತೆಗೆ ಡೆಬಿಟ್ ಮಾಡಲಾಗುತ್ತದೆ. ಪ್ರೀಪೇಯ್ಡ್ ಕಾರ್ಡ್ ಬಳಕೆಯ ಮೇಲೆ ಅನ್ವಯಿಸುವ ಶುಲ್ಕಗಳು/ಫೀಗಳನ್ನು ಕಾರ್ಡ್ ಹೊಂದಿರುವವರಿಗೆ ಮೊದಲೇ ಸೂಚನೆ ಇಲ್ಲದೇ ಕಾಲಕಾಲಕ್ಕೆ ESFB ಇಂದ ಪರಿಷ್ಕರಿಸಬಹುದು ಅಥವಾ ಬದಲಿಸಬಹುದು. ಶುಲ್ಕಗಳು ಮತ್ತು ಶುಲ್ಕಗಳ ಲೆಕ್ಕಾಚಾರದ ವಿಧಾನವನ್ನು ತನ್ನ ವೆಬ್‌ಸೈಟ್‌ನಲ್ಲಿ ಕಾಲಕಾಲಕ್ಕೆ ESFB ಸೂಚನೆ ನೀಡುತ್ತದೆ: www.equitasbank.com. ಪ್ರೀಪೇಯ್ಡ್ ಕಾರ್ಡ್ ಮೂಲಕ ಮಾಡಿದ ಯಾವುದೇ ವಹಿವಾಟಿನಿಂದ, ಅನ್ವಯಿಕ ಕಾನೂನುಗಳ ಅಡಿಯಲ್ಲಿ ಅಗತ್ಯದಂತೆ ಮೂಲದಲ್ಲಿ ತೆರಿಗೆ ಕಡಿತಗೊಳಿಸುವುದರಿಂದ ESFB ಅನ್ನು, ಇದರಲ್ಲಿ ಇರುವ ಯಾವುದೇ ಅಂಶವು ತಡೆಯುವುದಿಲ್ಲ.

ವಿವಾದಗಳು:

ಖರೀದಿ ವಹಿವಾಟಿನ ಸಂದರ್ಭದಲ್ಲಿ, ಕಾರ್ಡ್‌ಹೊಂದಿರುವವರ ಸಹಿಯೊಂದಿಗೆ ಸೇಲ್ಸ್ ಸ್ಲಿಪ್ ಮತ್ತು ಅದರಲ್ಲಿ ನಮೂದಿಸಿದ ESFB ಪ್ರೀಪೇಯ್ಡ್ ಕಾರ್ಡ್ ಸಂಖ್ಯೆಯು, ಕಾರ್ಡ್ ಹೊಂದಿರುವವರು ಭರಿಸಿದ ಬಾಧ್ಯತೆಯ ಮಟ್ಟದವರೆಗೆ ಬ್ಯಾಂಕ್ ಮತ್ತು ಕಾರ್ಡ್ ಹೊಂದಿರುವವರ ಮಧ್ಯೆ ಸಮಗ್ರ ಸಾಕ್ಷಿಯಾಗಿರುತ್ತದೆ.

ಯಾವುದೇ ಖರೀದಿಸಿದ ಸರಕುಗಳು ಅಥವಾ ಪಡೆದ ಸೇವೆಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯಾಪಾರಿ ಸಂಸ್ಥೆಯೊಂದಿಗೆ ಅಥವಾ ಅವರ ವಿರುದ್ಧ ಮಾಡಿದ ದೂರು ಅಥವಾ ವಿವಾದಗಳನ್ನು ಕಾರ್ಡ್ ಹೊಂದಿರುವವರು ವ್ಯಾಪಾರಿ ಸಂಸ್ಥೆಯೊಂದಿಗೆ ಮಾಡಬೇಕು.

ತನ್ನ ಪ್ರೀಪೇಯ್ಡ್ ಕಾರ್ಡ್ ಅನ್ನು ಯಾವುದೇ ಸಂಸ್ಥೆ ಗೌರವಿಸಲು ನಿರಾಕರಿಸಿದ್ದಕ್ಕೆ ESFB ಯಾವುದೇ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಸಮ್ಮತಿಸುವುದಿಲ್ಲ.

ಬಹಿರಂಗಗೊಳಿಸುವಿಕೆಗಳು:

ಪ್ರೀಪೇಯ್ಡ್ ಕಾರ್ಡ್ ಬಳಕೆಗೆ ಸಂಬಂಧಿಸಿದಂತೆ ಮತ್ತು ತನಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ಯಾವುದೇ ಬ್ಯಾಂಕ್ ಅಥವಾ ಹಣಕಾಸು ಅಥವಾ ಶಾಸನಾತ್ಮಕ ಅಥವಾ ನಿಯಂತ್ರಕ ಪ್ರಾಧಿಕಾರದ ಜೊತೆಗೆ ಹಂಚಿಕೊಳ್ಳಲು ಕಾರ್ಡ್ಹೊಂದಿರುವವರು ಸಮ್ಮತಿಸುತ್ತಾರೆ ಮತ್ತು ಅಂಗೀಕರಿಸುತ್ತಾರೆ.

ಪ್ರೀಪೇಯ್ಡ್ ಕಾರ್ಡ್ ಬಳಕೆಗೆ ಸಂಬಂಧಿಸಿದಂತೆ ಯಾವುದೇ ಅಪರಾಧಗಳು ಮತ್ತು/ಅತವಾ ಮಾಹಿತಿಯನ್ನು ಯಾವುದೇ ಬ್ಯಾಂಕ್ ಅಥವಾ ಹಣಕಾಸು ಅಥವಾ ಶಾಸನಾತ್ಮಕ ಅಥವಾ ನಿಯಂತ್ರಕ ಪ್ರಾಧಿಕಾರಕ್ಕೆ ESFB ವರದಿ ಮಾಡಬಹುದು ಎಂದು ಕಾರ್ಡ್ ಹೊಂದಿರುವವರು ಸಮ್ಮತಿಸುತ್ತಾರೆ ಮತ್ತು ಅಂಗೀಕರಿಸುತ್ತಾರೆ. ಈ ಬಹಿರಂಗಗೊಳಿಸುವಿಕೆಯ ವ್ಯಾಪ್ತಿಯನ್ನೂ ಒಳಗೊಂಡಂತೆ ಕಾರ್ಡ್ ಹೊಂದಿರುವವರಿಗೆ ಇಂತಹ ಬ್ಯಾಂಕ್‌ಗಳು ಅಥವಾ ಹಣಕಾಸು ಅಥವಾ ಶಾಸನಾತ್ಮಕ ಅಥವಾ ನಿಯಂತ್ರಕ ಪ್ರಾಧಿಕಾರದ ವಿವರಗಳನ್ನು ಬಹಿರಂಗಗೊಳಿಸಲು ESFB ಬಾಧ್ಯತೆಯನ್ನು ಹೊಂದಿಲ್ಲ.

ESFB ಅಫಿಲಿಯೇಟ್ಗಳ ಜೊತೆಗೆ ತನ್ನ ವಿವರಗಳು ಮತ್ತು ಪಾವತಿ ಇತಿಹಾಸಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನು ವಿನಿಮಯ, ಹಂಚಿಕೆ ಅಥವಾ ವಿಭಜಿಸಲು ESFB ಮತ್ತು ಅದರ ಏಜೆಂಟರುಗಳು, ನಾಮಿನಿಗಳು ಇತ್ಯಾದಿಗಳಿಗೆ ಕಾರ್ಡ್ ಹೊಂದಿರುವವರು ಅಧಿಕಾರ ನೀಡುತ್ತಾರೆ.

ಆಡಳಿತ ಕಾನೂನು ಮತ್ತು ನ್ಯಾಯವ್ಯಾಪ್ತಿ:

ಈ ನಿಯಮಗಳು ಮತ್ತು ಷರತ್ತುಗಳು ಸಂಬಂಧಿಸಿದಂತೆ ಉಂಟಾಗುವ ಎಲ್ಲ ವಿವಾದಗಳನ್ನು ಭಾರತದ ಕಾನೂನಿಗೆ ಅನುಗುಣವಾಗಿ ನಿರ್ವಹಿಸಲಾಗುತ್ತದೆ ಮತ್ತು ಭಾರತದ ಚೆನ್ನೈನ ನ್ಯಾಯಾಲಯದ ವಿಶೇಷ ನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಈ ನಿಯಮಗಳು ಮತ್ತು ಷರತ್ತುಗಳು ಬದಲಿಸುವುದು:

ಬಡ್ಡಿ ಶುಲ್ಕಗಳು ಅಥವಾ ದರಗಳು ಮತ್ತು ಲೆಕ್ಕಾಚಾರದ ವಿಧಾನಗಳೂ ಸೇರಿದಂತೆ, ಆದರೆ ಅದಕ್ಕೆ ಸೀಮಿತವಾಗದಂತೆ ಪ್ರೀಪೇಯ್ಡ್ ಕಾರ್ಡ್‌ನಲ್ಲಿ ಒದಗಿಸಿದ ಈ ನಿಯಮಗಳು ಮತ್ತು ಷರತ್ತುಗಳು, ವೈಶಿಷ್ಟ್ಯಗಳು ಮತ್ತು ಪ್ರಯೋಜನಗಳನ್ನು ಬದಲಿಸಲು, ತಿದ್ದುಪಡಿ ಮಾಡಲು, ರದ್ದುಗೊಳಿಸಲು ಮತ್ತು ಮಾರ್ಪಡಿಸಲು ESFB ಏಕಪಕ್ಷೀಯ ಹಕ್ಕನ್ನು ಕಾಯ್ದಿರಿಸಿದೆ.

a. ತನ್ನ ವೆಬ್‌ಸೈಟ್ www.equitasbank.com ನಲ್ಲಿ ತಿದ್ದುಪಡಿ ಮಾಡಿದ ನಿಯಮಗಳು ಮತ್ತು ಷರತ್ತುಗಳು ಹೋಸ್ಟ್ ಮಾಡುವ ಮೂಲಕ ಅಥವಾ ಅದು ನಿರ್ಧಾರ ಮಾಡಿದ ಇತರ ವಿಧಾನದಲ್ಲಿ ESFB ಸಂವಹನ ಮಾಡಬಹುದು.
b. ESFB ವೆಬ್‌ಸೈಟ್: www.equitasbank.com ನಲ್ಲಿ ಪೋಸ್ಟ್ ಮಾಡಿರಬಹುದಾದಂತೆ ನಿಯಮಗಳು ಮತ್ತು ಷರತ್ತುಗಳು ಕಾರ್ಡ್ ಹೊಂದಿರುವವರು ಓದಿದ್ದಾರೆ ಎಂದು ಭಾವಿಸಲಾಗುತ್ತದೆ ಮತ್ತು ಪ್ರೀಪೇಯ್ಡ್ ಕಾರ್ಡ್ ಬಳಕೆಯನ್ನು ಮುಂದುವರಿಸುವ ಮೂಲಕ ESFB ವೆಬ್‌ಸೈಟ್‌ನಲ್ಲಿ ಪೋಸ್ಟ್ ಮಾಡಿದ ನಿಯಮಗಳು ಮತ್ತು ಷರತ್ತುಗಳು ಕಾರ್ಡ್ ಹೊಂದಿರುವವರು ಒಪ್ಪಿದ್ದಾರೆ ಎಂದು ಭಾವಿಸಲಾಗುತ್ತದೆ.

ಗ್ರಾಹಕರ ದೂರು ಪರಿಹಾರ:

a. ಪ್ರೀಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಮತ್ತು/ಅಥವಾ ಈ ನಿಯಮಗಳು ಮತ್ತು ಷರತ್ತುಗಳು ಸಂಬಂಧಿಸಿದಂತೆ ಯಾವುದೇ ವಿವಾದ ಅಥವಾ ದೂರು ಇದ್ದಲ್ಲಿ, ESFB 24 ಗಂಟೆ ಗ್ರಾಹಕ ಸೇವೆ ಸಂಖ್ಯೆ 1800 103 1222 ಗೆ ಕಾರ್ಡ್ ಹೊಂದಿರುವವರು ಸಂಪರ್ಕಿಸಬಹುದು ಅಥವಾ customerservice@equitasbank.com ಗೆ ಇಮೇಲ್ ಕಳುಹಿಸಬಹುದು ಅಥವಾ ಇಲ್ಲಿಗೆ ಪತ್ರ ಬರೆಯಬಹುದು. ಇಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್, 4ನೇ ಮಹಡಿ, ಸ್ಪೆನ್ಸರ್ ಪ್ಲಾಜಾ, ನಂ. 769, ಹಂತ 2, ಅನ್ನಾ ಸಲೈ ಚೆನ್ನೈ – 600 002.
b. ಪ್ರೀಪೇಯ್ಡ್‌ಕಾರ್ಡ್ ಮತ್ತು/ಅಥವಾ ಈ ನಿಯಮಗಳು ಮತ್ತು ಷರತ್ತುಗಳು ಸಂಬಂಧಿಸಿದಂತೆ ಯಾವುದೇ ವಿವಾದ ಅಥವಾ ದೂರನ್ನು ಸೂಕ್ತವಾಗಿ ಪರಿಹರಿಸದಿದ್ದರೆ ಅಥವಾ ESFB ಗ್ರಾಹಕ ಸೇವೆಯು ಪರಿಹರಿಸದಿದ್ದರೆ, ESFB ಪ್ರಧಾನ ನೋಡಲ್ ಅಧಿಕಾರಿಯನ್ನು ಗ್ರಾಹಕರು ಸಂಪರ್ಕಿಸಬಹುದು. ಅವರ ವಿವರಗಳನ್ನು ಇದರ ವೆಬ್‌ಸೈಟ್‌ನಲ್ಲಿ ನೋಡಬಹುದು.
c. ಕಾರ್ಡ್ ಹೊಂದಿರುವವರು ದಾಖಲಿಸಿದ ಎಲ್ಲ ದೂರುಗಳು, ವಿವಾದಗಳು ಅಥವಾ ಆಕ್ಷೇಪಣೆಗಳನ್ನು ಸಕಾಲಿಕವಾಗಿ ಪರಿಹರಿಸಲಾಗುತ್ತದೆ ಮತ್ತು/ಅಥವಾ ನಿವಾರಿಸಲಾಗುತ್ತದೆ ಎಂದು ESFB ಸಮ್ಮತಿಸುತ್ತದೆ.
d. ಕಾರ್ಡ್ ಹೊಂದಿರುವವರು ಯಾವುದೇ ಸಮಯದಲ್ಲಿ ತಮ್ಮ ದೂರು ಪರಿಹಾರಕ್ಕಾಗಿ ಬ್ಯಾಂಕಿಂಗ್ ಒಂಬಡ್ಸ್‌ಮನ್ ಅನ್ನು ಸಂಪರ್ಕಿಸಬಹುದು.

ಇಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಏಕಪಕ್ಷೀಯ ವಿವೇಚನೆಗೆ ಒಳಪಟ್ಟು ಕಾಲಕಾಲಕ್ಕೆ ಈ ಮೇಲಿನ ನಿಯಮಗಳು ಮತ್ತು ಷರತ್ತುಗಳು ಬದಲಿಸಬಹುದಾಗಿದೆ. ಪರಿಷ್ಕರಿಸಿದ ನಿಯಮಗಳು ಮತ್ತು ಷರತ್ತುಗಳು, ದಯವಿಟ್ಟು ನಮ್ಮ ವೆಬ್‌ಸೈಟ್ **www.Equitasbank.com** ಗೆ ಭೇಟಿ ನೀಡಿ.